

ಪ್ರಥಮ ನೀರು ಕಾಗೆ ಮತ್ತೊಂದು ಕಡೆ ಆಕ್ರಮಣಕಾರನ ಜೊತೆಗೂ ಸೆಣಸಾಡಬೇಕಿತ್ತು. ಈ ಜಗಳ ನಡೆಯುವಾಗ ತಮಗೂ ಲಾಭವಾಗದೆಂಬ ದುರಾಸೆಯಿಂದ ಕೆಲ ನೀರು ಕಾಗೆಗಳು ಹಾರಿ ಬಂದು ಜಗಳವನ್ನು ಮತ್ತಷ್ಟು ಹೆಚ್ಚಿಸಿದವು. ಅಷ್ಟರಲ್ಲಿ ದೂರದಲ್ಲಿ ಈಜಿಪ್ಟಿಯನ್ ರಣಹದ್ದುಗಳು ಕಂಡವೆಂದು ಬೋಟಿನವನು ದಿಕ್ಕು ಬದಲಿಸಿದ.

ಈಜಿಪ್ಟಿಯನ್ ವಲ್ಚರ್‌ಗಳು ಈಗ ಬಹಳ ಅಪರೂಪವಾಗಿವೆ. ಇವು ತಿನ್ನುವ ಪ್ರಾಣಿಗಳ ದೇಹದಲ್ಲಿನ ವಿಷದ ಪ್ರಮಾಣ ಹೆಚ್ಚಾಗಿರುವುದು ಕೂಡ ಇವುಗಳ ಸಾವಿಗೆ ಕಾರಣ. ಕೆದರಿದ ತಲೆಯ ಹಳದಿ ಮುಖದ ಈ ಹದ್ದುಗಳು ನೋಡಲು ಸೊಗಸಾಗಿದ್ದವು. ಬಿಳಿಯ ದೇಹಕ್ಕೆ ಕಪ್ಪು ಬಣ್ಣದ ಚೌಕಟ್ಟು. ತೀಕ್ಷ್ಣ ಕಣ್ಣು ಮತ್ತು ಬಾಗಿದ ಚೂಪಾದ ಕೊಕ್ಕು. ತಕ್ಷಣಕ್ಕೆ ನಮ್ಮ ಅಂಗಳದಲ್ಲಿ ಓಡಾಡುವ ನಾಟಿ ಕೋಳಿಗಳಂತೆ ಕಾಣುತ್ತಿದ್ದವು. ಪ್ರಣಯ ಚೇಷ್ಟೆಯಲ್ಲಿ ಮೈಮರೆತು ಪ್ರಪಂಚದ ಖಬರೂ ಇಲ್ಲದ ಇವುಗಳ ಎಲ್ಲಾ ವೈಖರಿಗಳನ್ನು ಬಹಳ ಹೊತ್ತು ಕೂತು ನೋಡಿದೆವು. ಒಂದೇ ಬೇಸರವೆಂದರೆ ಈ ಎಲ್ಲಾ ಅಪರೂಪದ ಪಕ್ಷಿಗಳು ನಮಗೆ ಸಾಕಷ್ಟು ದೂರದಲ್ಲಿದ್ದವು. ಇನ್ನು ಕೆಲವು ವರ್ಷಗಳು ಕಳೆದರೆ ಮತ್ತೆಂದು ಕಾಣದಷ್ಟು ದೂರ ಹೊರಟು ಹೋಗುವ ವಿನಾಶದ ಹಾದಿಯಲ್ಲಿ ಇವೂ ಇದ್ದಾವೆ. ನಮ್ಮ ಬೋಟು ಕೂಡ ಹೆದರಿ ತೀರಾ ದಡದ ಸಮೀಪಕ್ಕೆ ಹೋಗುತ್ತಿರಲಿಲ್ಲ. ಸಿಕ್ಕಿಕೊಳ್ಳುವ ಭಯದಲ್ಲಿ ಸಾಧ್ಯವಾದಷ್ಟು ನದಿಯ ಆಳದ ಹರಿವು ಇರುವ ಕಡೆಗೇ ಚಲಿಸುತ್ತಿತ್ತು.

ಮನುಷ್ಯನ ದುರಾಸೆ ಮತ್ತು ನಿರ್ಲಕ್ಷ್ಯದ ಕಾರಣದಿಂದ ಅನೇಕ ಪ್ರಾಣಿ ಪಕ್ಷಿಗಳು ಈ ಲೋಕದಿಂದ ಶಾಶ್ವತವಾಗಿ ಕಣ್ಮರೆಯಾಗಿವೆ. ಇನ್ನು ಕೆಲವು ಜಾಗಖಾಲಿ ಮಾಡುವ ಹಂತದಲ್ಲಿದ್ದಾವೆ. ಹೀಗೆ ಟಾಟಾ ಹೇಳಿ ಹೊರಟು ಹೋಗಲಿರುವ ಅನೇಕ ಸಂತತಿಗಳನ್ನು ನಾವು ಚಂಬಲ್ ಪ್ರವಾಸದಲ್ಲಿ ಕಂಡೆವು. ಚಂಬಲ್ ಎಂದರೆ ಡಕಾಯಿತರು ಇರುವ ಜಾಗ ಎಂಬ ನಮ್ಮ ಭ್ರಮೆಯನ್ನು ಅಳಿಸಿ ಹಾಕಿದ ಅಲ್ಲಿನ ಜೀವ ವೈವಿಧ್ಯತೆ ಬೆರಗು ಹುಟ್ಟಿಸಿತು. ಇಲ್ಲಿ ನಡೆಯುತ್ತಿರುವ ಮರುಳು ಗಣಿಗಾರಿಕೆ ಈ ಸೊಬಗನ್ನು ಹೆಚ್ಚು ದಿನ ಉಳಿಸುವ ಲಕ್ಷಣಗಳು ಕಾಣುತ್ತಿರಲಿಲ್ಲ. ಬಾಯಿಲ್ಲದ ಅಪರೂಪದ ಜೀವ ಜಂತುಗಳು ಕೊನೆಯಾದರೆ ಯಾರಿಗೂ ಕಾಣಿಸುವುದೂ ಇಲ್ಲ ಮತ್ತು ಕೇಳಿಸುವುದೂ ಇಲ್ಲ.

●